**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ**

ವಿಧಾನ ಸೌಧ, ಬೆಂಗಳೂರು- 560 001
ದೂರವಾಣಿ ಸಂ: 080-22359562/ 22359563 (ಶಾಸಕರ ಭವನ)

**ಬೆಂಗಳೂರಿನ ಶಾಸಕರ ಭವನದ ಆವರಣದಲ್ಲಿರುವ ಉತ್ತರ ಕರ್ನಾಟಕ ಶೈಲಿಯ ರೊಟ್ಟಿ ಖಾನಾವಳಿ ನಡೆಸಲು ಆನ್‌ಲೈನ್‌ಟೆಂಡರ್**

(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

https://eproc.karnataka.gov.in

**ಬಿಡ್ಡಿಂಗ್ ದಾಖಲಾತಿ- ದ್ವಿಲಕೋಟೆ ಪದ್ಧತಿ**

ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು
ಬೆಂಗಳೂರು- 560 001

**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ**
ವಿಧಾನ ಸೌಧ, ಬೆಂಗಳೂರು- 560 001
ದೂರವಾಣಿ ಸಂ: 080-22359562/ 22359563 (ಶಾಸಕರ ಭವನ)

ಸಂಖ್ಯೆ: ಕೆಎಲ್‌ಸಿ/ಉಗ್ರ/77/2019-20, ದಿ: 12.11.2019

28/11/19

**ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ**

ಶಾಸಕರ ಭವನದ ಆವರಣದಲ್ಲಿನ ಉತ್ತರ ಕರ್ನಾಟಕ ಶೈಲಿಯ ರೊಟ್ಟಿ ಖಾನಾವಳಿ ನಡೆಸಲು ದ್ವಿ-ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್‌ಟೆಂಡರ್ ಅನ್ನುಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. 16/12/19

ಬಿಡ್ಡ್ ದಾಖಲಾತಿಗಳು ದಿನಾಂಕ: 12.11.2019 (28/11/19) ರಿಂದ 25.11.2019 ರವರೆಗೆ https://eproc.karnataka.gov.inವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಆಸಕ್ತ ಬಿಡ್‌ದಾರರು ಬಿಡ್ ದಾಖಲಾತಿಗಳನ್ನು ಅದರಲ್ಲಿ ವೀಕ್ಷಿಸಬಹುದು, ಡೌನ್‌ಲೋಡ್ ಮಾಡಿಕೊಂಡು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

16/12/19

ಆನ್‌ಲೈನ್ ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಲು **ಕೊನೆಯ ದಿನಾಂಕ:25.11.2019, 23.59 ಗಂಟೆಗೆ.**

ಬಿಡ್‌ಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬೇಕು. ಟೆಂಡರ್ ಅಂಗೀಕಾರ ಪ್ರಾಧಿಕಾರವು ಯಾವುದೇ ಕಾರಣ ನೀಡದೇ ಟೆಂಡರ್‌ಅನ್ನು ಸ್ವೀಕರಿಸುವ/ ತಿರಸ್ಕರಿಸುವ/ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

ಅವಶ್ಯವಿದ್ದಲ್ಲಿ, ಆಸಕ್ತ ಬಿಡ್‌ದಾರರು ಶಾಸಕರ ಭವನದ ಆವರಣದಲ್ಲಿರುವ ಹೋಟೆಲ್ ಕಟ್ಟಡದ ಆವರಣವನ್ನು ಬಿಡ್ ಸಲ್ಲಿಸುವ ಪೂರ್ವದಲ್ಲಿ ಸ್ಥಳ ಭೇಟಿ ಮಾಡಬಹುದು.

ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ**
ವಿಧಾನ ಸೌಧ, ಬೆಂಗಳೂರು- 560 001

## ಕಾರ್ಯಕ್ರಮಗಳ ವೇಳಾಪಟ್ಟಿ

**ಟೆಂಡರ್ ಅಧಿಸೂಚನೆ ಸಂ:**ಕೆಎಲ್‌ಸಿ/ಉಗ್ರ/77/2019-20, ದಿ:12.11.2019

28/11/19

| ಕ್ರ.ಸಂ | ಕಾರ್ಯಕ್ರಮಗಳು | ದಿನಾಂಕ ಮತ್ತು ಸಮಯ |
|---|---|---|
| 1. | ಬಿಡ್‌ದಾರರು ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ Re-Tender Date | ದಿ: **25.11.2019, 23-59** ಘಂಟೆ 16.12.2019 |
| 2. | ಬಿಡ್‌ದಾರರೊಂದಿಗಿನ ಪೂರ್ವಭಾವಿ ಸಭೆ | ದಿ: 19.11.2019, 11-30 ಘಂಟೆ<br>ಸ್ಥಳ: ಕೊಠಡಿ ಸಂಖ್ಯೆ: 100,<br>1ನೇ ಮಹಡಿ, ಶಾಸಕರ ಭವನ-1<br>ಬೆಂಗಳೂರು |
| 3. | ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ Re Tender | ದಿ:28-11-2019, 11-30ಘಂಟೆ 18-12-2019 |
| 4. | ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ(**20ನೇ ದಿನ**) Re Tender | ದಿ:05-12-2019, 11-30ಘಂಟೆ 21-12-2019 |

**ಸಂಪರ್ಕಕ್ಕಾಗಿ ವಿಳಾಸ:**

ಉಪ ಕಾರ್ಯದರ್ಶಿ,
ಶಾಸಕರ ಭವನ-1, ಕರ್ನಾಟಕ ವಿಧಾನ ಪರಿಷತ್ತು
ಬೆಂಗಳೂರು- 560 001
ದೂರವಾಣಿ: 080-22359563/22359562

## ಕರ್ನಾಟಕ ವಿಧಾನ ಪರಿಷತ್ತು

ಕೆಎಲ್‌ಸಿ/ಉಗ್ರ/77/2019-20

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ: 5079, ವಿಧಾನ ಸೌಧ,
ಬೆಂಗಳೂರು – 560 001, ದಿನಾಂಕ:12.11.2019.
28/11/19

**ಇ-ಟೆಂಡರ್‌ಅಧಿಸೂಚನೆ**

ವಿಷಯ: ವಿಧಾನ ಪರಿಷತ್ತಿನ ಶಾಸಕರ ಭವನ ಕಟ್ಟಡದಲ್ಲಿರುವ ಉತ್ತರ ಕರ್ನಾಟಕ ಶೈಲಿಯ ರೊಟ್ಟಿ ಖಾನಾವಳ ನಡೆಸಲು ಗುತ್ತಿಗೆ ನೀಡುವ ಬಗ್ಗೆ.

*****

1) **ಕೆಲಸದ ಉದ್ದೇಶ ಮತ್ತು ವ್ಯಾಪ್ತಿ:-**

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ವ್ಯಾಪ್ತಿಗೊಳಪಡುವ ಶಾಸಕರ ಭವನದಲ್ಲಿನ ಸುಸಜ್ಜಿತ ರೊಟ್ಟಿ ಖಾನಾವಳ, ಇದನ್ನು ನಡೆಸುವ ಮೂಲಕ ವಿಧಾನಮಂಡಲದ ಮಾನ್ಯ ಸದಸ್ಯರುಗಳಿಗೆ, ಸಚಿವಾಲಯದ ಸಿಬ್ಬಂದಿಗಳಿಗೆ, ಸಮಿತಿಗಳ ಸಭೆಗೆ ಹಾಗೂ ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ಉತ್ತರ ಕರ್ನಾಟಕ ಶೈಲಿಯ ಆಹಾರ ಪದಾರ್ಥವನ್ನು ಒದಗಿಸುವುದು.

ವರ್ಷದಎಲ್ಲಾ ದಿನಗಳಲ್ಲಿ ಬೆಳಗ್ಗೆ 6.00 ಗಂಟೆಯಿಂದ ರಾತ್ರಿ 9.00 ಗಂಟೆಯವರೆಗೆ ಉಪಹಾರ ಮಂದಿರವನ್ನು ತೆರೆದಿರಬೇಕು.

2) **ಗುತ್ತಿಗೆ ನೀಡಲಾಗುವ ಟೆಂಡರ್‌ನಅವಧಿ:-**

ಶಾಸಕರ ಭವನದಲ್ಲಿನ ರೊಟ್ಟಿ ಖಾನಾವಳಿಯ ಗುತ್ತಿಗೆ ಅವಧಿಯು ಕಾರ್ಯಾದೇಶದಲ್ಲಿ ನಿಗಧಿಪಡಿಸಿದ ದಿನಾಂಕದಿಂದ ಮುಂದಿನ ಮೂರು ವರ್ಷದ ಅವಧಿಗೆ ಮಾತ್ರ ಜಾರಿಯಲ್ಲಿರುವುದು. ಪರಿಷತ್ ಸಚಿವಾಲಯದ ಸಕ್ಷಮ ಪ್ರಾಧಿಕಾರವು ತೀರ್ಮಾನಿಸಿದಲ್ಲಿ, ಸದರಿ ಅವಧಿ ಮುಗಿದ ನಂತರ ಮರು ಟೆಂಡರ್ ಪ್ರಕ್ರಿಯೆ ಮೂಲಕ ಯಶಸ್ವಿ ಬಿಡ್‌ದಾರರನ್ನು ಆಯ್ಕೆ ಮಾಡುವವರೆಗೆ ಮುಂದುವರೆಸಬಹುದು.

3) **ಇ.ಎಂ.ಡಿ ಮತ್ತುಇತರೆಮೊತ್ತ:-**

3.1 ಶಾಸಕರ ಭವನದ ಕಟ್ಟಡದಲ್ಲಿ ರೊಟ್ಟಿ ಖಾನಾವಳಿಯನ್ನು ನಡೆಸುವ ಗುತ್ತಿಗೆ ಪಡೆಯುವ ಇ-ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ವ್ಯಕ್ತಿ/ಸಂಸ್ಥೆಯು ರೂ.1.20 ಲಕ್ಷ (ರೂಪಾಯಿ ಒಂದು ಲಕ್ಷ ಇಪ್ಪತ್ತು ಸಾವಿರಗಳು ಮಾತ್ರ) ಇ.ಎಂ.ಡಿ ಮೊತ್ತವನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತಿಳಿಸಿರುವ ರೀತ್ಯಾ ಪಾವತಿಸತಕ್ಕದ್ದು. ಈ ಇ.ಎಂ.ಡಿ ಮೊತ್ತಕ್ಕೆ ಯಾವುದೇ ಬಡ್ಡಿ ನೀಡಲಾಗುವುದಿಲ್ಲ.

3.2.ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಯಶಸ್ವಿ ಬಿಡ್‌ದಾರರನ್ನು ಹೊರತು ಪಡಿಸಿ ಉಳಿದ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ಇ-ಪಾವತಿ ಮೂಲಕವೇ ಇ-ಪ್ರಕ್ಯೂರ್‌ಮೆಂಟ್ ವತಿಯಿಂದ ಮರು ಪಾವತಿಸಲಾಗುವುದು.

3.3. ಯಶಸ್ವಿ ಬಿಡ್‌ದಾರರು ಭದ್ರತಾ ಠೇವಣಿ ಮೊತ್ತವನ್ನು ಪಾವತಿಸಿದ ನಂತರ ಇ.ಎಂ.ಡಿ ಮೊತ್ತವನ್ನು ಹಿಂತಿರುಗಿಸಲಾಗುವುದು.

3.4. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಇ.ಎಂ.ಡಿ ಜೊತೆಗೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವತಿಯಿಂದ ವಿಧಿಸುವ ಇತರೆ ಮೊತ್ತವನ್ನು ಪಾವತಿಸಲು ಬದ್ಧರಿರತಕ್ಕದ್ದು.

4.**<u>ಟೆಂಡರ್ ಸಲ್ಲಿಸುವಿಕೆ:-</u>**

4.1.ಆಸಕ್ತ ಬಿಡ್‌ದಾರರು ನಿಗಧಿಪಡಿಸಿರುವ ದಿನಾಂಕ ಮತ್ತು ಸಮಯದೊಳಗೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕವೇ ಟೆಂಡರ್ ಸಲ್ಲಿಸುವುದು.

4.2. ಎಲ್ಲಾ ದಾಖಲೆಗಳ ಪ್ರತೀ ಪುಟಕ್ಕೆ, ಬಿಡ್‌ದಾರರು ಅಥವಾ ಸಂಸ್ಥೆಯಾಗಿದ್ದಲ್ಲಿ, ಅಧಿಕೃತವಾಗಿ ಸಹಿ ಮಾಡಲು ಅಧಿಕಾರ ಹೊಂದಿರುವವರು ಸಹಿ ಮಾಡಿರತಕ್ಕದ್ದು.

4.3.ಟೆಂಡರ್‌ನ ಸ್ವೀಕೃತಿ ದಿನಾಂಕವನ್ನು ವಿಸ್ತರಿಸುವ ಅಥವಾ ಟೆಂಡರ್ ಪ್ರಕ್ರಿಯೆಯನ್ನು ರದ್ದು ಪಡಿಸುವ ಅಧಿಕಾರವನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹೊಂದಿರುತ್ತದೆ.

5.**<u>ಟೆಂಡರ್‌ಜೊತೆ ಸಲ್ಲಿಸಬೇಕಾದ ದಾಖಲೆಗಳು:-</u>**

5.1. ಟೆಂಡರ್ ದಾಖಲೆಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬೇಕಾಗಿದ್ದು, ತಾಂತ್ರಿಕಬಿಡ್(Technical Bid) ಮತ್ತುಆರ್ಥಿಕಬಿಡ್ (Financial Bid) ಗೆ ಸಂಬಂಧಿಸಿದ ದಾಖಲೆಗಳನ್ನು ಆಯಾ ಅಂಕಣದಲ್ಲಿ ಅಪ್‌ಲೋಡ್ ಮಾಡಿ ಬಿಡ್‌ಅನ್ನು ದಾಖಲಿಸತಕ್ಕದ್ದು.

5.2. ತಾಂತ್ರಿಕ ಬಿಡ್‌ದಾಖಲೆ ಸಲ್ಲಿಸುವ ಭಾಗದಲ್ಲಿ ಆರ್ಥಿಕ ಬಿಡ್‌ಗೆ ಸಂಬಂಧಿಸಿದ ಯಾವುದೇ ಮಾಹಿತಿ ಸಲ್ಲಿಕೆಯಾಗಿದಲ್ಲಿ, ನಿಗಧಿತ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಮತು್ತಅಪೂರ್ಣ ಮಾಹಿತಿಯುಳ್ಳ ಬಿಡ್‌ಗಳನ್ನು ಸಲ್ಲಿಸಿದ್ದಲ್ಲಿ ಅಂತಹ ಬಿಡ್‌ಗಳನ್ನು ಅನರ್ಹವೆಂದು ಪರಿಗಣಿಸಲಾಗುವುದು.

5.3. **ತಾಂತ್ರಿಕ ಬಿಡ್‌ನಲ್ಲಿಅರ್ಹತೆ ಪಡೆಯಲುಸಲ್ಲಿಸಬೇಕಾದಮೂಲ/ ದೃಢೀಕೃತ ದಾಖಲೆಗಳು:-**

5.3.1 ನಿಗಧಿತಇ.ಎಂ.ಡಿ. ಮೊತ್ತವನ್ನು ಪಾವತಿಸಿರುವ ಕುರಿತಾದ ದಾಖಲೆ.

5.3.2 ಉತ್ತರ ಕರ್ನಾಟಕ ಶೈಲಿಯರೊಟ್ಟಿ ಖಾನಾವಳಿ ನಡೆಸಿರುವುದಕ್ಕೆ ಸಂಬಂಧಿಸಿದಂತೆ 3 ವರ್ಷಗಳ ಅನುಭವ ಹೊಂದಿರುವ ಕುರಿತಾದ ದಾಖಲೆ.

5.3.3 ಪ್ರಸ್ತುತ ನಡೆಸುತ್ತಿರುವ ರೊಟ್ಟಿ ಖಾನಾವಳಿಗಳ ಹೆಸರು, ವಿಳಾಸ, ಸಂಪರ್ಕ ವ್ಯಕ್ತಿಯ ವಿವರ ಹಾಗೂ ದೂರವಾಣಿ ಸಂಖ್ಯೆ ಒಳಗೊಂಡ ವಿವರಗಳುಳ್ಳ ತಃಖ್ತೆ ಮತ್ತು ಅವುಗಳಿಗೆ ಸಂಬಂಧಿಸಿದ ಸೂಕ್ತ ದಾಖಲೆಗಳ ಪ್ರತಿ.

5.3.4 ರೊಟ್ಟಿ ಖಾನಾವಳಿಯನ್ನು ನಡೆಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಪ್ರಾಧಿಕಾರದ ವತಿಯಿಂದ ಪಡೆದಿರುವ ಪರವಾನಗಿ ದಾಖಲೆ.

5.3.5 ಹೊರ ರಾಜ್ಯದ ಅಥವಾ ಬೆಂಗಳೂರು ಹೊರತುಪಡಿಸಿದ ಸ್ಥಳಗಳಲ್ಲಿನ ಸಂಸ್ಥೆಗಳಾಗಿದ್ದಲ್ಲಿ ಆಯಾ ಸ್ಥಳೀಯ ಸಂಸ್ಥೆಗಳಿಂದ ಪಡೆದಿರುವ ಪರವಾನಗಿ ದಾಖಲೆಗಳನ್ನು ಸಲ್ಲಿಸುವುದು. ಮುಂದುವರೆದು, ಅಂತಹ ಸಂಸ್ಥೆಯು ಆಯ್ಕೆಗೊಂಡಲ್ಲಿ ಬಿ.ಬಿ.ಎಂ.ಪಿಯಿಂದ ಪರವಾನಗಿ ಪಡೆದು ಸಲ್ಲಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

5.3.6 ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಮಾಣ ಪತ್ರ (FSSAI Certificate)

5.3.7 ಖಾನಾವಳಿ ನಡೆಸಲು ಪಡೆದಿರುವ ಐ.ಎಸ್.ಓ ಪ್ರಮಾಣ ಪತ್ರ(ISO Certificate)

5.3.8 ಗುತ್ತಿಗೆ ಕಾರ್ಮಿಕರ ಪರವಾನಗಿ ಸೇರಿದಂತೆಇ.ಎಸ್.ಐ, ಪಿ.ಎಫ್ ಹಾಗೂ ಜಿ.ಎಸ್.ಟಿಗೆ ಸಂಬಂಧಪಟ್ಟಂತೆ ಆಯಾ ಸಕ್ಷಮ ಪ್ರಾಧಿಕಾರಗಳಿಂದ ಪಡೆದಿರುವ ನೋಂದಣಿ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿ ಮತ್ತು ಕಳೆದ ಸಾಲಿನಲ್ಲಿ ಆಯಾ ಇಲಾಖೆಗೆ ಸಲ್ಲಿಸಿರುವ ರಿಟರ್ನ್ಸ್‌ಗಳ ಪ್ರತಿಗಳು.

5.3.9 ಆದಾಯತೆರಿಗೆ ಇಲಾಖೆಗೆ ಸಲ್ಲಿಸಿರುವ 2016-17, 2017-18 ಮತ್ತು 2018-19ನೇ ಸಾಲಿನ ರಿಟರ್ನ್ಸ್‌ಗಳ ದೃಢೀಕೃತ ಪ್ರತಿ.

5.3.10 ಬಿಡ್‌ದಾರರ ಅಥವಾ ಸಂಸ್ಥೆಯ ಪ್ಯಾನ್‌ಕಾರ್ಡ್ (PAN Card) ಪ್ರತಿ.

5.3.11 ಕಳೆದ 3 ಆರ್ಥಿಕ ವರ್ಷಗಳಲ್ಲಿ ವಾರ್ಷಿಕವಾಗಿ ಕನಿಷ್ಠ ರೂ.20,00,000/- (ಇಪ್ಪತ್ತು ಲಕ್ಷ ರೂಪಾಯಿಗಳ) ವಹಿವಾಟನ್ನು ನಡೆಸಿರುವುದನ್ನು ಖಾತ್ರಿಪಡಿಸುವ ದೃಢೀಕೃತ ದಾಖಲೆಗಳ ಪ್ರತಿ.

5.3.12 ಚಾರ್ಟರ್ಡ್‌ಅಕೌಂಟೆಂಟ್‌ರವರಿಂದ ದೃಢೀಕರಿಸಿರುವ ಕಳೆದ 3 ವರ್ಷಗಳ ಬ್ಯಾಲೆನ್ಸ್ ಶೀಟ್ ಪ್ರತಿ.

5.3.13 ಬಿಡ್‌ದಾರರು ಸಂಸ್ಥೆ/ಪಾಲುದಾರ ಸಂಸ್ಥೆಯ ಪರವಾಗಿ ಬಿಡ್ ಸಲ್ಲಿಸುತ್ತಿದ್ದಲ್ಲಿ ಮಾತ್ರ ಸದರಿ ಬಿಡ್ ಸಲ್ಲಿಸಲು ಆಯಾ ಸಂಸ್ಥೆಗಳಿಂದ ಪಡೆದಿರುವ ಅಧಿಕಾರ ಪತ್ರದ ದೃಡೀಕೃತ ಪ್ರತಿ.

5.3.14 ಕಳೆದ 5 ವರ್ಷಗಳಲ್ಲಿ ಬಿಡ್‌ದಾರರು ಅಥವಾ ಸಂಸ್ಥೆಯು ಕಪ್ಪುಪಟ್ಟಿಗೆ ಸೇರಿಲ್ಲ ಮತ್ತು ಸಲ್ಲಿಸಲಾಗುವ ಬಿಡ್‌ಅನ್ನು ಹಿಂಪಡೆಯುವುದಿಲ್ಲ ಎಂಬುದರ ಬಗ್ಗೆ ಸ್ವ-ದೃಢೀಕರಣ ಪತ್ರ.

**5.4ಆರ್ಥಿಕ ಬಿಡ್ ವಿಭಾಗದಲ್ಲಿ ಸಲ್ಲಿಸಬೇಕಾದ ದಾಖಲೆಗಳು:-**

5.4.1. ಅನುಬಂಧ-1ರಲ್ಲಿ ನಮೂದಿಸಿರುವ ವಿವಿಧ ತಿಂಡಿ ತಿನಿಸುಗಳ ದರವನ್ನು ನಿರ್ದಿಷ್ಟಪಡಿಸಿರುವ ದರ ಅಥವಾ ದರಕ್ಕಿಂತ ಕಡಿಮೆ ಮೊತ್ತವನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಬೇಕು.

5.4.2 ಗುತ್ತಿಗೆ ಅವಧಿ (ವಿಸ್ತರಣೆ/ನವೀಕರಣಅವಧಿ ಸೇರಿದಂತೆ) ಮುಗಿಯುವವರೆಗೆ ನಮೂದಿಸಲಾದ ದರಗಳಲ್ಲಿಯೇ ಆಹಾರ ಪದಾರ್ಥವನ್ನು ಪೂರೈಸಬೇಕು. ಆದರೆ ಕಾಲಕಾಲಕ್ಕೆ ಶಾಸನಬದ್ಧ ತೆರಿಗೆ ಮತ್ತು ಇತರೆ ದರಗಳಲ್ಲಿ ವ್ಯತ್ಯಾಸ ಆದಲ್ಲಿ ಅದಕ್ಕನುಗುಣವಾಗಿ ದರ ಪರಿಷ್ಕರಣೆಗೆ ಪರಿಗಣಿಸಲಾಗುವುದು.

5.4.3 ಅನುಬಂಧ-1ರಲ್ಲಿ ನಮೂದಿಸಲಾದ ಆಹಾರ ಪದಾರ್ಥಗಳನ್ನು ಹೊರತುಪಡಿಸಿದ ಆಹಾರಗಳಿಗೆ ಸಚಿವಾಲಯದೊಂದಿಗೆ ಸಮಾಲೋಚಿಸಿ, ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ದರ ನಿಗಧಿಪಡಿಸಬಹುದು ಮತ್ತು ಸಕಾರಣಗಳಿದ್ದಲ್ಲಿ ಮಾತ್ರ ಅಂತಿಮಗೊಳಿಸಿದ ದರವನ್ನು ಸಹ ಇದೇ ಮಾದರಿಯಲ್ಲಿ ಪರಿಷ್ಕರಣೆ ಮಾಡಬಹುದು.

**6.ರೊಟ್ಟಿ ಖಾನಾವಳಿಯ ಗುತ್ತಿಗೆಗೆ ಸಂಬಂಧಿಸಿದ ನಿಬಂಧನೆಗಳು:-**

6.1 ಸದರಿ ಉಪಾಹಾರ ಮಂದಿರವನ್ನು 3 (ಮೂರು) ವರ್ಷದ ಅವಧಿಗೆ ಮಾತ್ರ ನಡೆಸಲು ಅನುಮತಿ ನೀಡಲಾಗುವುದು. ಯಾವುದೇ ಹಂತದಲ್ಲಿ 30 ದಿನಗಳ ನೋಟೀಸ್‌ನ್ನು ನೀಡುವ ಮೂಲಕ ಈ ಗುತ್ತಿಗೆಯನ್ನು ರದ್ದುಗೊಳಿಸುವ ಅಧಿಕಾರವನ್ನು ವಿಧಾನ ಪರಿಷತ್ತಿನ ಸಚಿವಾಲಯವು ಕಾಯ್ದಿರಿಸಿಕೊಂಡಿದೆ.

6.2 ಲೋಕೋಪಯೋಗಿ ಇಲಾಖೆಯು ನಿಗಧಿಪಡಿಸಿರುವ ರೂ.57,877/-(ಐವತ್ತೇಳು ಸಾವಿರದಎಂಟು ನೂರುಎಪ್ಪತ್ತೇಳು ರೂಪಾಯಿಗಳು ಮಾತ್ರ) ಗಳನ್ನು ಮಾಸಿಕ ಬಾಡಿಗೆಯಾಗಿ ನಿಗಧಿ ಪಡಿಸಿದೆ. ಸದರಿ ಬಾಡಿಗೆ ಮೊತ್ತವನ್ನು ಕರಾರಿನ ಅವಧಿಯಲ್ಲಿ ಪ್ರತಿ ವರ್ಷ ಶೇ.5 ರಂತೆ ಹೆಚ್ಚಿಸಲಾಗುವುದು.

6.3 ನಿಗಧಿಪಡಿಸಿರುವ ಮಾಸಿಕ ಬಾಡಿಗೆ ಮೊತ್ತವನ್ನು ಮುಂದಿನ ತಿಂಗಳ 10ನೇ ತಾರೀಖಿನೊಳಗೆ ಪಾವತಿಸತಕ್ಕದ್ದು. ತಪ್ಪಿದಲ್ಲಿ ಪ್ರತೀ ತಿಂಗಳ ವಿಳಂಬಕ್ಕೆ ಶೇ.5ರಷ್ಟು ದಂಡವನ್ನು ಹೆಚ್ಚುವರಿಯಾಗಿ ಪಾವತಿ ಮಾಡಬೇಕಾಗುತ್ತದೆ.

6.4 ರೊಟ್ಟಿ ಖಾನಾವಳಿಯ ವಿದ್ಯುತ್ ಮತ್ತು ನೀರಿನ ಬಿಲ್ಲನ್ನು ಗುತ್ತಿಗೆದಾರರೇ ತಪ್ಪದೇ ಪ್ರತಿ ತಿಂಗಳು ಆಯಾ ಸಂಸ್ಥೆಗಳಿಗೆ ಪಾವತಿಮಾಡತಕ್ಕದ್ದು.

6.5 ಶಾಸಕರ ಭವನದರೊಟ್ಟಿ ಖಾನಾವಳಿಯ ಒಟ್ಟು ವಿಸ್ತೀರ್ಣ 249.56ಚದರ ಮೀಟರ್ ಇರುತ್ತದೆ.

6.6 ಟೆಂಡರ್‌ದಾರರು ತಮ್ಮ ಟೆಂಡರ್‌ಗಳನ್ನು ಪೂರ್ಣ ಹೆಸರು ಮತ್ತು ಸಹಿಯೊಂದಿಗೆ ಸಲ್ಲಿಸಬೇಕು. ಒಂದುವೇಳೆ ಸಂಸ್ಥೆ/ ಪಾಲುದಾರ ಸಂಸ್ಥೆಯ ಪರವಾಗಿ ಸಲ್ಲಿಸುತ್ತಿದ್ದಲ್ಲಿ ಅಧಿಕೃತವಾಗಿ ಸಹಿ ಮಾಡಲು ಅಧಿಕಾರ ಹೊಂದಿರುವವರು ಸೂಕ್ತ ದಾಖಲೆಯೊಂದಿಗೆ ಹೆಸರು ನಮೂದಿಸಿ, ಸಹಿ ಮಾಡಿ ಸಲ್ಲಿಸಬೇಕು.

6.7 ಟೆಂಡರ್‌ದಾರರು ತಮ್ಮ ವಾಸ ಸ್ಥಳ, ಅಂಚೆ ವಿಳಾಸ, ಈ-ಮೇಲ್ ಹಾಗೂ ದೂರವಾಣಿ ಸಂಖ್ಯೆಯನ್ನು ಸ್ಪಷ್ಟವಾಗಿ ಟೆಂಡರ್‌ನಲ್ಲಿ ನಮೂದಿಸತಕ್ಕದ್ದು.

6.8 ಪ್ರತಿಯೊಂದು ಆಹಾರ ಪದಾರ್ಥಗಳಿಗೆ ನಿಗಧಿಪಡಿಸಲಾಗುವ ದರ ಮತ್ತು ಪ್ರಮಾಣವನ್ನು ಎಲ್ಲರಿಗೂ ತಿಳಿಯುವಂತೆ ಹೋಟೆಲ್ ಆವರಣದಲ್ಲಿ ಪ್ರದರ್ಶಿಸಬೇಕು.

6.9 ಗುತ್ತಿಗೆ ಅವಧಿಯಲ್ಲಿ ಯಾವುದೇ ವ್ಯಾಜ್ಯ ಉಂಟಾದಲ್ಲಿ ಅದನ್ನು ಪರಿಹರಿಸಿಕೊಳ್ಳಲು ಬೆಂಗಳೂರಿನಲ್ಲಿರುವ ನ್ಯಾಯಾಲಯಗಳ ವ್ಯಾಪ್ತಿಗೆ ಸೀಮಿತವಾಗಿರುತ್ತದೆ.

6.10 ಉಪಾಹಾರ ಮಂದಿರವನ್ನು ಸ್ವಚ್ಛವಾಗಿ ಇಡುವುದಲ್ಲದೇ ಸೋಂಕು,ರೋಗ ಹರಡದಂತೆ ನೈರ್ಮಲ್ಯೀಕರಣ ಕ್ರಮ ಕೈಗೊಳ್ಳುವುದು ಹಾಗೂ ಇಲಿ, ನೊಣ, ಸೊಳ್ಳೆ ಇತ್ಯಾದಿಗಳ ಸಮಸ್ಯೆಗಳು ಉಂಟಾಗದಂತೆ ಕಾಲಕಾಲಕ್ಕೆ ಸೂಕ್ತ ಔಷಧಿಯನ್ನು ಸಿಂಪಡಿಸಿಕೊಂಡು ರೊಟ್ಟಿ ಖಾನಾವಳಿ ಹಾಗೂ ಸುತ್ತಮುತ್ತಲಿನ ಆವರಣವನ್ನು ಸ್ವಚ್ಛವಾಗಿಟ್ಟುಕೊಳ್ಳತಕ್ಕದ್ದು.

6.11 ಉಪಾಹಾರ ಮಂದಿರದಲ್ಲಿ ಸರಬರಾಜು ಮಾಡಲಾಗುವ ತಿಂಡಿ-ತಿನಿಸು, ಆಹಾರ ಪದಾರ್ಥಗಳ ಸೇವನೆಯಿಂದ ಗ್ರಾಹಕರು ಅಸ್ವಸ್ಥರಾದರೆ ಮತ್ತು ಅದರಿಂದ ಉಂಟಾಗುವ ಪರಿಣಾಮಗಳಿಗೆ ಗುತ್ತಿಗೆದಾರರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ತಿಂಡಿ-ತಿನಸುಗಳಿಗೆ ಆರೋಗ್ಯಕ್ಕೆ ಮಾರಕವಾಗುವ ಯಾವುದೇ ರಾಸಾಯನಿಕ ಬಣ್ಣ ಹಾಗೂ ಪದಾರ್ಥಗಳನ್ನು ಬಳಸಕೂಡದು.

6.12 ಉಪಾಹಾರ ಮಂದಿರ ನಡೆಸುವ ವ್ಯಕ್ತಿ/ಸಂಸ್ಥೆಯು ಯಾವುದೇ ಅನಧಿಕೃತ ಚಟುವಟಿಕೆ, ಅವ್ಯವಸ್ಥಿತ ನಿರ್ವಹಣೆ ಅಥವಾ ಯಾವುದೇ ಅವಘಡವಾದಲ್ಲಿ ಅದರ ಜವಾಬ್ದಾರಿಯನ್ನು ಹೊತ್ತುತನ್ನ ಸಿಬ್ಬಂದಿಗಳಿಗಾಗಲಿ ಅಥವಾ ಗ್ರಾಹಕರಿಗಾಗಲಿ ಸೂಕ್ತ ಪರಿಹಾರ ನೀಡುವುದಕ್ಕೆ ವ್ಯಕ್ತಿ/ಸಂಸ್ಥೆಯು ಬದ್ಧವಾಗಿರತಕ್ಕದ್ದು.

6.13 ವಿಧಾನ ಪರಿಷತ್ತಿನ ಶಾಸಕರ ಭವನದರೊಟ್ಟಿ ಖಾನಾವಳಿಯಲ್ಲಿ ಅಳವಡಿಸಲಾಗಿರುವ ಉಪಕರಣಗಳು, ಕುರ್ಚಿ ಮತ್ತು ಮೇಜುಗಳ ವಿವರಗಳನ್ನು **ಅನುಬಂಧ-2ರಲ್ಲಿ** ನಮೂದಿಸಿದ್ದು, ಅವುಗಳನ್ನು ಹೇಗಿದಿಯೋ ಹಾಗೆ ಒದಗಿಸಲಾಗುವುದು. ಅವುಗಳನ್ನು ಹೊರತುಪಡಿಸಿ ಇತರೆ ಯಾವುದೇ ಉಪಕರಣ, ಪರಿಕರಗಳನ್ನು ಯಶಸ್ವಿ ಬಿಡ್‌ದಾರರೆತಮ್ಮ ಸ್ವಂತಖರ್ಚಿನಲ್ಲಿ ಪಡೆಯಬಹುದು. ಜೊತೆಗೆ ಪೂರೈಸಿರುವ ವಸ್ತುಗಳ ನಿರ್ವಹಣೆಯನ್ನು ಸಹ ಯಶಸ್ವಿ ಬಿಡ್‌ದಾರರೆ ಮಾಡಿಕೊಳ್ಳತಕ್ಕದ್ದು.

6.14 ಯಶಸ್ವಿ ಟೆಂಡರ್‌ದಾರರು ರೊಟ್ಟಿ ಖಾನಾವಳಿ ಮತ್ತು ಅದರ ಆವರಣದಲ್ಲಿ ಇನ್ಯಾವುದೇ ವಾಣಿಜ್ಯ ಚಟುವಟಿಕೆಗಳನ್ನು ನಡೆಸುವಂತಿಲ್ಲ.

6.15 ಯಶಸ್ವಿ ಟೆಂಡರ್‌ದಾರರು ಯಾವ ಕಾರಣಕ್ಕೂ ತಾವು ಗುತ್ತಿಗೆ ಪಡೆದ ರೊಟ್ಟಿ ಖಾನಾವಳಿಯನ್ನು ಉಪ ಗುತ್ತಿಗೆ ನೀಡುವುದಾಗಲಿ, ಬೇರೆಯವರಿಗೆ ವರ್ಗಾಯಿಸುವುದಾಗಲಿ ಮಾಡುವಂತಿಲ್ಲ.

6.16 ರೊಟ್ಟಿ ಖಾನಾವಳಿಗೆ ಖರೀದಿಸುವ ದಿನಸಿ ಪದಾರ್ಥಗಳು ಹಾಗೂ ತರಕಾರಿಗಳ ಗುಣಮಟ್ಟ ಸೇರಿದಂತೆ ಆಹಾರ ಪದಾರ್ಥಗಳ ಗುಣಮಟ್ಟವನ್ನು ಗುತ್ತಿಗೆದಾರರೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು. ಅವಶ್ಯವಿದ್ದಲ್ಲಿ ಪರಿಷತ್ ಸಚಿವಾಲಯದ ಅಧಿಕಾರಿಗಳು ಗುಣಮಟ್ಟದ ಬಗ್ಗೆ ಸೂಕ್ತ ಪರೀಕ್ಷೆಗಳನ್ನು ಮಾಡಿಸಲಿದ್ದು, ಸದರಿ ಪರೀಕ್ಷೆಗಳಿಗೆ ತಗಲುವ ವೆಚ್ಚವನ್ನು ಗುತ್ತಿಗೆದಾರರೆ ಭರಿಸತಕ್ಕದ್ದು.

6.17 ರೊಟ್ಟಿ ಖಾನಾವಳಿಯಲ್ಲಿ ಸರಬರಾಜು ಮಾಡುವ ತಿಂಡಿ/ತಿನಿಸುಗಳ ಗುಣಮಟ್ಟ ಹಾಗೂ ಆಹಾರ ಸರಬರಾಜು ಮಾಡುವ ಸಿಬ್ಬಂದಿಗಳ ಸ್ವಚ್ಛತೆಗೆ ಸಂಬಂಧಿಸಿದಂತೆ ಸಚಿವಾಲಯದ ಅಧಿಕಾರಿಗಳು ಆಗಿಂದಾಗ್ಗೆ ಭೇಟಿ ನೀಡಿ ಪರಿಶೀಲನೆ ಮಾಡುವ ಅಧಿಕಾರ ಹೊಂದಿರುತ್ತಾರೆ. ಅಂತಹ ಸಂದರ್ಭದಲ್ಲಿ ನೀಡಲಾಗುವ ಸಲಹೆ, ನಿರ್ದೇಶನಗಳನ್ನು ಪಾಲಿಸಲು ಗುತ್ತಿಗೆದಾರರು ಬದ್ಧರಿರತಕ್ಕದ್ದು.

6.18 ಶುದ್ಧವಾದ ಕುಡಿಯುವ ನೀರು/ಬಿಸಿನೀರನ್ನು ಉಚಿತವಾಗಿ ಗ್ರಾಹಕರಿಗೆ ಒದಗಿಸಬೇಕು.

6.19 ರೊಟ್ಟಿ ಖಾನಾವಳಿಯನ್ನು ನಿರಂತರವಾಗಿ ಶುಚಿಗೊಳಿಸಬೇಕು ಹಾಗೂ ಇದರ ಮೇಲುಸ್ತುವಾರಿಯನ್ನು ಮೇಲ್ವಿಚಾರಕರು ಸೂಕ್ತವಾಗಿ ನಿರ್ವಹಿಸತಕ್ಕದ್ದು.

6.20 ರೊಟ್ಟಿ ಖಾನಾವಳಿಯಲ್ಲಿ ಉಪಯೋಗಿಸುವ ಲೋಟ, ಪಾತ್ರೆ ಮುಂತಾದ ಪರಿಕರಗಳನ್ನು ಬಿಸಿನೀರಿನಲ್ಲಿ ಸ್ವಚ್ಛಗೊಳಿಸಬೇಕು.

6.21 ರೊಟ್ಟಿ ಖಾನಾವಳಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ವರ್ಗದವರು ನಿರ್ದಿಷ್ಠ ಸಮವಸ್ತ್ರವನ್ನು ಹಾಗೂ ಅಡುಗೆ ಮನೆ, ವಿತರಣೆ ಕೌಂಟರ್ ಗಳಲ್ಲಿ ಕಾರ್ಯನಿರ್ವಹಿಸುವವರು ಸಮವಸ್ತ್ರದೊಂದಿಗೆ ತಲೆ ಮತ್ತು ಕೈಗಳಿಗೆ ಅವಶ್ಯ ಸುರಕ್ಷಾ ಕವಚಗಳನ್ನು ಹಾಕಿಕೊಳ್ಳತಕ್ಕದ್ದು.

6.22 ಅದೇರೀತಿ ಸಿಬ್ಬಂದಿಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ವೈದ್ಯಕೀಯ ತಪಾಸಣೆಗೆ ಒಳಪಡಿಸಬೇಕು ಮತ್ತು ಕಾರ್ಮಿಕ ಇಲಾಖೆಯ ನಿಯಮಾವಳಿ ಪ್ರಕಾರ ಅವರುಗಳಿಗೆ ನೀಡಬೇಕಾದ ಎಲ್ಲಾ ಸವಲತ್ತುಗಳನ್ನು ನೀಡಲು ಗುತ್ತಿಗೆದಾರರು ಬದ್ಧರಿರತಕ್ಕದ್ದು.

6.23 ರೊಟ್ಟಿ ಖಾನಾವಳಿಯ ಸಿಬ್ಬಂದಿಗಳು ಮಾನ್ಯ ಸದಸ್ಯರುಗಳೊಂದಿಗೆ ಮತ್ತು ಗ್ರಾಹಕರೊಂದಿಗೆ ಸೌಜನ್ಯಯುತವಾಗಿ ವ್ಯವಹರಿಸುವಂತೆ ಸೂಕ್ತ ತಿಳುವಳಿಕೆ ನೀಡತಕ್ಕದ್ದು.

6.24 ರೊಟ್ಟಿ ಖಾನಾವಳಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಬಿ.ಬಿ.ಎಂ.ಪಿ ನಿಯಮಾವಳಿ ರೀತ್ಯಾ ವಿಲೇ ಮಾಡಬೇಕು.

6.25 ಟೆಂಡರ್ ದಾಖಲೆಗಳಲ್ಲಿನ ಷರತ್ತು ಮತ್ತು ನಿಬಂಧನೆಗಳ ಕುರಿತುಯಾವುದೇ ಗೊಂದಲಗಳಿದ್ದಲ್ಲಿ ಟೆಂಡರ್‌ದಾಖಲೆಯಲ್ಲಿ ನಮೂದಿಸಿರುವ ಸಂಪರ್ಕ ವಿಳಾಸದ ಅಧಿಕಾರಿಯನ್ನು ಸಂಪರ್ಕಿಸಿ ಮೌಖಿಕವಾಗಿ ಅಥವಾ ಲಿಖಿತವಾಗಿ ಸ್ಪಷ್ಟೀಕರಣ ಪಡೆಯಬಹುದು. ಇದರಿಂದಾಗಿಟೆಂಡರ್ ದಾಖಲೆಗಳಲ್ಲಿ ಯಾವುದೇ ಬದಲಾವಣೆ ಅವಶ್ಯವಿದ್ದಲ್ಲಿ, **ಅಂತಹ ಮಾಹಿತಿಯನ್ನು ಇ-ಪೋರ್ಟಲ್‌ನಲ್ಲಿ ಮತ್ತು ಸಚಿವಾಲಯದ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು**.

6.26 ಆಯ್ಕೆಯಾಗುವ ಯಶಸ್ವಿ ಬಿಡ್‌ದಾರರು ನಿಗದಿತ ಸಮಯದೊಳಗೆ 10 ತಿಂಗಳ ಬಾಡಿಗೆ ಮೊತ್ತದ ಭದ್ರತಾ ಠೇವಣಿಯನ್ನು ಡಿ.ಡಿ.ಮೂಲಕ ಪಾವತಿಸಿ, ಒಪ್ಪಂದ ಕರಾರನ್ನು ಸಹಿ ಮಾಡಿಕರಾರು ಸಹಿ ಮಾಡಿದ ದಿನಾಂಕದಿಂದ ಒಂದು ವಾರದೊಳಗಾಗಿ ರೊಟ್ಟಿ ಖಾನಾವಳಿಯನ್ನು ಪ್ರಾರಂಭಿಸತಕ್ಕದ್ದು. ತಪ್ಪಿದಲ್ಲಿ, ಪಾವತಿಸಿರುವ ಇ.ಎಂ.ಡಿ ಮೊತ್ತ/ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

6.27 ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಹಾಗೂ ಯಾವುದೇ ಒಂದು ನಿರ್ಧಿಷ್ಟ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ಇವರು ಹೊಂದಿರುತ್ತಾರೆ.

6.28 ಟೆಂಡರ್ ವಿಷಯದಲ್ಲಿ ವಿವಾದವುಂಟಾದಲ್ಲಿ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ವಿಧಾನ ಸೌಧ, ಬೆಂಗಳೂರು, ಇವರ ತೀರ್ಮಾನವು ಅಂತಿಮವಾಗಿರುತ್ತದೆ.

6.29 ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ, ಮೊದಲ ಬಾರಿಗೆ ಅವುಗಳನ್ನು ಸರಿಪಡಿಸಿಕೊಳ್ಳಲು 15 ದಿನಗಳ ಕಾಲಾವಕಾಶ ನೀಡಲಾಗುವುದು. ಶುಚಿತ್ವ ಸೇರಿದಂತೆ ಆಹಾರಗುಣಮಟ್ಟ ಕಾಯ್ದುಕೊಳ್ಳಲು ವಿಫಲರಾದಲ್ಲಿ ಮತ್ತು ಉಲ್ಲಂಘನೆಗಳು ಪುನರಾವರ್ತನೆ ಆದಲ್ಲಿ ಗುತ್ತಿಗೆಯನ್ನು ರದ್ದುಪಡಿಸಿ ಭದ್ರತಾ ಠೇವಣಿ ಮುಟ್ಟುಗೋಲು ಹಾಕಿಕೊಳ್ಳಲು ಕಾರ್ಯದರ್ಶಿಯವರಿಗೆ ಸಂಪೂರ್ಣ ಅಧಿಕಾರವಿರುತ್ತದೆ.

6.30 ಹೆಚ್ಚಿನ ವಿವರಗಳಿಗಾಗಿ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು-560001 ಅಥವಾ ಕ್ಷೇತ್ರಾಧಿಕಾರಿಯವರ ಕಚೇರಿ, ಶಾಸಕರ ಭವನ, ಬೆಂಗಳೂರು, ಇವರನ್ನು ಕಚೇರಿಯಲ್ಲಿ ಕೆಲಸದ ದಿನಗಳಲ್ಲಿ ಸಂಪರ್ಕಿಸಬಹುದು.

6.31 ಯಶಸ್ವಿ ಬಿಡ್‌ದಾರರುತಮ್ಮ ಸ್ವಂತಖರ್ಚಿನಲ್ಲಿ ಸದರಿ ರೊಟ್ಟಿ ಖಾನಾವಳಿಯನ್ನು ನಡೆಸಲು ಅವಶ್ಯವಿರುವ ಎಲ್ಲಾ ಶಾಸನಬದ್ಧ ಅನುಮತಿ ಪತ್ರಗಳು, ಪರವಾನಗಿ ಇತ್ಯಾದಿಗಳನ್ನು ಪಡೆಯಬೇಕು.

**7. ಟೆಂಡರ್‌ತೆರೆಯುವುದು:**

7.1 ಇ–ಪ್ರಕ್ಯೂರ್‌ಮೆಂಟ್ ಡಾಕ್ಯುಮೆಂಟ್‌ನಲ್ಲಿ ನಿಗಧಿಪಡಿಸಿದ ದಿನಾಂಕದಂದು ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಸದರಿ ಬಿಡ್ ತೆರೆಯುವ ದಿನಾಂಕಗಳು ಸಾರ್ವತ್ರಿಕ ರಜಾ ದಿನವಾದಲ್ಲಿ ಮಾರನೆಯ ಕೆಲಸದ ದಿನ ತೆರೆಯಲಾಗುವುದು.

7.2 ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದ ಬಿಡ್‌ದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ನಿಗದಿತ ದಿನಾಂಕದಂದು ತೆರೆಯಲಾಗುವುದು.

**೮) ಟೆಂಡರ್‌ಗಳ ಮೌಲ್ಯಮಾಪನ:–**

೮.1 ಎಲ್ಲಾ ಷರತ್ತುಗಳನ್ನು ಪೂರೈಸಿ ಎಲ್ಲಾ ಅವಶ್ಯ ದಾಖಲೆಗಳನ್ನು ಸಲ್ಲಿಸಿರುವ ಅರ್ಹ ಬಿಡ್‌ದಾರರನ್ನು ಅಂತಿಮಗೊಳಿಸಲಾಗುವುದು.

೮.2 ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ ಬಿಡ್‌ದಾರರು ಹಾಲಿ ನಡೆಸುತ್ತಿರುವ ರೊಟ್ಟಿ ಖಾನಾವಳಿಗಳ ಸ್ಥಳ ಪರಿಶೀಲನೆಯನ್ನು ಕೈಗೊಂಡು ಅಲ್ಲಿನ ಸ್ವಚ್ಚತೆ, ಆಹಾರಗುಣಮಟ್ಟ ಮತ್ತು ನಿರ್ವಹಣೆ ಕುರಿತು ಪರಿಶೀಲಿಸಲಾಗುವುದು.

೮.3 ತದನಂತರ ಆರ್ಥಿಕ ಬಿಡ್‌ಗಳನ್ನು ತೆರೆದು ತಿಂಡಿ ತಿನಿಸುಗಳ ಒಟ್ಟಾರೆ ದರವನ್ನು ಪರಿಗಣಿಸಿ ಬಿಡ್‌ದಾರರನ್ನು ಗುರುತಿಸಲಾಗುವುದು.

೮.4 ಆರ್ಥಿಕ ಬಿಡ್‌ಗಳ ಒಟ್ಟಾರೆ ಮೊತ್ತದೊಂದಿಗೆ ಸ್ಥಳ ಪರಿಶೀಲನಾ ವರದಿಯಲ್ಲಿನ ಅಂಶಗಳಾದ ಬಿಡ್‌ದಾರರ ಅನುಭವ, ಹಾಲಿ ನಡೆಸುತ್ತಿರುವ ಹೋಟೆಲ್/ಉಪಾಹಾರ ಗೃಹಗಳ ಶುಚಿತ್ವ, ಆಹಾರ ಗುಣಮಟ್ಟ ಇತ್ಯಾದಿ ಅಂಶಗಳನ್ನು ಸಹ ಪರಿಗಣಿಸಿ ಅರ್ಹ ಯಶಸ್ವಿ ಬಿಡ್‌ದಾರರನ್ನು ಆಯ್ಕೆ ಮಾಡಿ, ಲೆಟರ್ ಆಫ್ ಇಂಡೆಂಟ್‌ಅನ್ನು ನೀಡಲಾಗುವುದು.

೮.5 ಕಳೆದ 3 ವರ್ಷಗಳಲ್ಲಿ ಬಿಡ್‌ದಾರರ/ ಸಂಸ್ಥೆಯ ವಿರುದ್ಧ ಶುಚಿತ್ವಅಥವಾ ಆಹಾರಗುಣಮಟ್ಟ ಕಾಯ್ದುಕೊಳ್ಳದ ಆರೋಪದಲ್ಲಿ ಸಕ್ಷಮ ಪ್ರಾಧಿಕಾರವು ದಂಡ ವಿಧಿಸಿದ್ದಲ್ಲಿ, ಸದರಿ ಅಂಶವನ್ನು ಸಹ ಮೌಲ್ಯಮಾಪನದ ಸಮಯದಲ್ಲಿ ಪರಿಗಣಿಸಲಾಗುವುದು.

೮.6 ಟೆಂಡರ್ ಪ್ರಕ್ರಿಯೆಯ ಮೇಲೆ ಪ್ರಭಾರ ಬೀರುವಂತಹ ಆಸೆ, ಆಮಿಷ, ಒತ್ತಡ ಇತ್ಯಾದಿ ಕ್ರಿಯೆಯಲ್ಲಿ ತೊಡಗುವ ಹಾಗೂ ಟೆಂಡರ್ ಉದ್ದೇಶವನ್ನು ವಿಫಲಗೊಳಿಸುವ ಭಾಗವಾಗಿ ಆಹಾರ ಪದಾರ್ಥಗಳ ದರಗಳನ್ನು ಅವಾಸ್ತವಿಕವಾಗಿ ನಮೂದಿಸುವ ಬಿಡ್‌ದಾರರನ್ನು ಅನರ್ಹರೆಂದು ಪರಿಗಣಿಸಲಾಗುವುದು.

9. **ಟೆಂಡರ್‌ಅವಾರ್ಡ್‌ ಮಾಡುವುದು:-**

9.1 ಲೆಟರ್ ಆಫ್ ಇಂಡೆಂಟ್ ಪಡೆದ ಯಶಸ್ವಿ ಬಿಡ್‌ದಾರರು, ಅದನ್ನು ಸ್ವೀಕರಿಸಿದ 10 ದಿನಗಳೊಳಗೆ ಭದ್ರತಾ ಠೇವಣಿ ಮೊತ್ತವನ್ನು ಸಚಿವಾಲಯಕ್ಕೆ ಡಿ.ಡಿ. ಮೂಲಕ ಪಾವತಿಸುವುದು.

9.2 ಅದರಂತೆ, ಬಾಡಿಗೆಕರಾರು ಮಾಡಿಕೊಂಡುರೊಟ್ಟಿ ಖಾನಾವಳಿಯನ್ನು ಕಾರ್ಯಾರಂಭ ಮಾಡುವ ಬಗ್ಗೆ ಕಾರ್ಯಾದೇಶ ನೀಡಲಾಗುವುದು. ತದನಂತರ ನಿಗದಿತ ಮೌಲ್ಯದ ಛಾಪಾ ಕಾಗದದಲ್ಲಿ ಒಪ್ಪಂದಕರಾರಿಗೆ ಸಹಿ ಮಾಡಬೇಕು. ಈ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡ ನಂತರವೇ ಯಶಸ್ವಿ ಬಿಡ್‌ದಾರರ ಇ.ಎಂ.ಡಿ ಮೊತ್ತವನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಹಿಂತಿರುಗಿಸಲಾಗುವುದು.

9.3 ಯಾವುದೇ ಹಂತದಲ್ಲಿ ಒಪ್ಪಂದಕರಾರನ್ನು ಸಹಿ ಮಾಡಿ ಸಲ್ಲಿಸಲು ವಿಫಲರಾದಲ್ಲಿ ಅಥವಾ ರೊಟ್ಟಿ ಖಾನಾವಳಿಯನ್ನು ಕಾರ್ಯಾರಂಭ ಮಾಡಲು ವಿಫಲರಾದಲ್ಲಿ ಬಿಡ್‌ದಾರರು ಪಾವತಿಸಿರುವ ಇ.ಎಂ.ಡಿ/ ಭದ್ರತಾಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಗುತ್ತಿಗೆಯನ್ನು ರದ್ದುಪಡಿಸಲಾಗುವುದು ಮತ್ತು ಅಂತಹ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು.

**ಅನುಬಂಧ-1**

**ರೊಟ್ಟಿ ಖಾನಾವಳಿಯಲ್ಲಿ ಸಿದ್ಧಪಡಿಸಿ ಪೂರೈಸುವಆಹಾರ ಪದಾರ್ಥಗಳಿಗೆ ಬಿಡ್‌ದಾಖಲಿಸಬೇಕಾದದರ ವಿವರ**

**Only Reference for the bidder not to be uploaded in e procurement portal**

| ಕ್ರ.ಸಂ | ಆಹಾರ ಪದಾರ್ಥಗಳ ವಿವರ | ಪ್ರಮಾಣ/ತೂಕ | ಮಾನ್ಯ ಸದಸ್ಯರು & ಸಿಬ್ಬಂದಿಗಳಿಗೆ ನಿಗಧಿಪಡಿಸಿರುವ ಗರಿಷ್ಠ ಮೊತ್ತ (ರೂ.ಗಳಲ್ಲಿ) | ನಮೂದಿಸಬೇಕಾದ ಬಿಡ್ ಮೊತ್ತ (ರೂ.ಗಳಲ್ಲಿ) |
|---|---|---|---|---|
| 1. | ರೊಟ್ಟಿ ಊಟ (ಪ್ಲೇಟ್ ಊಟ) | 1 ಸಂಖ್ಯೆ | 55.00 | |
| 2. | ರೊಟ್ಟಿ ಊಟ (ಫುಲ್ ಊಟ) | 1 ಸಂಖ್ಯೆ | 60.00 | |
| 3. | ರೊಟ್ಟಿ (ಪಲ್ಯ ಸಹಿತ) | 2 ಸಂಖ್ಯೆ | 25.00 | |
| 4. | ಖಾರಾ ಬಾತ್ | 100 ಗ್ರಾಂ | 25.00 | |
| 5. | ಕೇಸರಿ ಬಾತ್ | 100 ಗ್ರಾಂ | 25.00 | |
| 6. | ಚೌಚೌ ಬಾತ್ | 200 ಗ್ರಾಂ | 40.00 | |
| 7. | ಮಂಡಕ್ಕಿಜೊತೆ2 ಮಿರ್ಚಿ ಬಜ್ಜಿ | 100 ಗ್ರಾಂ | 40.00 | |

| | | | | |
|---|---|---|---|---|
| 8. | ಗಿರ್ಮಿಟ್ | 100 ಗ್ರಾಂ | 30.00 | |
| 9. | ಶೇಂಗಾ ಹೋಳಿಗೆ | 1 ಸಂಖ್ಯೆ | 15.00 | |
| 10. | ಬಜ್ಜಿ/ ಬೋಂಡ | 75 ಗ್ರಾಂ | 25.00 | |
| 11. | ಕಾಫಿ/ ಟೀ / ಹಾಲು | 100 ಎಂ.ಎಲ್ | 20.00 | |
| 12. | ಬಾದಾಮಿ ಹಾಲು/ ಬೋರ್ನ್‌ವೀಟಾ/ ಹಾರ್ಲಿಕ್ಸ್ | 100 ಎಂ.ಎಲ್ | 20.00 | |

**ವಿಶೇಷ ಸೂಚನೆ:**

1. **ರೊಟ್ಟಿ ಊಟ (ಪ್ಲೇಟ್ ಊಟ)**– 2ಜೋಳದ ರೊಟ್ಟಿ, ಉತ್ತರ ಕರ್ನಾಟಕ ಶೈಲಿಯ 2 ರೀತಿಯ ಕಾಯಿ/ಕಾಳು ಪಲ್ಯ, ಶೇಂಗಾ ಚಟ್ನಿ, ಮೊಸರು, ರಸಂ,ಅನ್ನ, ಸಾಂಬಾರ್, ಕೋಸಂಬರಿ,ಹಪ್ಪಳ,ಉಪ್ಪಿನ ಕಾಯಿಇರತಕ್ಕದ್ದು.

2. **ರೊಟ್ಟಿ ಊಟ (ಫುಲ್ ಊಟ)** –ಅನಿಯಮಿತ ಸಂಖ್ಯೆಯ ಜೋಳದ ರೊಟ್ಟಿ, ಉತ್ತರ ಕರ್ನಾಟಕ ಶೈಲಿಯ 2 ರೀತಿಯ ಕಾಯಿ/ಕಾಳು ಪಲ್ಯ, ಶೇಂಗಾ ಚಟ್ನಿ, ಮೊಸರು, ರಸಂ,ಅನ್ನ, ಸಾಂಬಾರ್, ಕೋಸಂಬರಿ, ಹಪ್ಪಳ,ಉಪ್ಪಿನ ಕಾಯಿ ಇರತಕ್ಕದ್ದು.

3. ಕೂಲ್‌ಡ್ರಿಂಕ್ಸ್, ಕರದಂಟು, ಕುಂದಾ, ಪೇಡಾ, ಕುಡಿಯುವ ನೀರಿನ ಬಾಟಲ್ ಸೇರಿದಂತೆ ಪ್ರತಿಷ್ಠಿತ ಕಂಪನಿಯ ಇತರೆ ಆಹಾರ ಉತ್ಪನ್ನಗಳನ್ನು **ಗರಿಷ್ಠ ಮಾರಾಟ ಬೆಲೆಕ್ಕಿಂತ ಹೆಚ್ಚಿನದರದಲ್ಲಿ ಮಾರಾಟ ಮಾಡುವಂತಿಲ್ಲ**.

4. **ಶಾಸಕರ ಭವನದ ಕೊಠಡಿಗಳಿಗೆ ಪೂರೈಸುವಆಹಾರ ಪದಾರ್ಥಗಳಿಗೆ ಒಂದು ಬಾರಿಯ ಸೇವೆಗೆ ರೂ.10ರಂತೆ ಸೇವಾ ಶುಲ್ಕವನ್ನು ಹೆಚ್ಚುವರಿಯಾಗಿ ಪಡೆಯಬಹುದು.**

5. **ಶಾಸಕರ ಭವನ, ವಿಧಾನ ಸೌಧ, ವಿಕಾಸ ಸೌಧಗಳಲ್ಲಿ ನಡೆಯುವ ಸಭೆ/ ಸಮಾರಂಭಗಳಿಗೆ, ಸರಬರಾಜು ಮಾಡುವ ಆಹಾರ ಪದಾರ್ಥಗಳಿಗೆ ನಮೂದಿಸಿರುವ ದರಕ್ಕಿಂತ ರೂ.10ಗಳನ್ನು (ಪ್ಲೇಟ್‌ಒಂದಕ್ಕೆ) ಹೆಚ್ಚುವರಿಯಾಗಿ ಪಡೆಯಬಹುದು.**

## ಅನುಬಂಧ-2

**ರೊಟ್ಟಿ ಖಾನಾವಳಿಗೆ ಒದಗಿಸಲಾಗಿರುವ ಪೀಠೋಪಕರಣ ಮತ್ತುಇತರೆ ವಸ್ತುಗಳ ಪಟ್ಟಿ**

| ಕ್ರ.ಸಂ | ವಸ್ತುಗಳ ವಿವರ | ಸಂಖ್ಯೆ |
|---|---|---|
| 01. | ಡೈನಿಂಗ್‌ಟೇಬಲ್ ವಿತ್ ಸ್ಟೀಲ್ ಲೆಗ್ | 11 |
| 02. | ಎಕ್ಸಾಸ್ಟ್ ಫ್ಯಾನ್ | 02 |
| 03. | ಗ್ಯಾಸ್ ಬರ್ನರ್‌ಗಳು | 06 |
| 04. | ಗ್ಯಾಸ್ ಸಿಲಿಂಡರ್‌ಗಳು | 06 |
| 05. | ಟ್ಯೂಬ್ ಲೈಟ್‌ಗಳು | 10 |
| 06. | ಬಲ್ಬುಗಳು | 14 |
| 07. | ಡಸ್ಟ್‌ಬಿನ್ (ಟ್ರಾಲಿ) | 02 |
| 08. | ರುಬ್ಬುವಕಲ್ಲು (ಅಲ್ಯೂಮಿನಿಯಂ ಮಿಕ್ಸರ್ ಗ್ರೈಂಡರ್) | 01 |
| 09. | ವಾಟರ್ ಹೀಟರ್ | 02 |
| 10. | ಪ್ಲಾಸ್ಟಿಕ್ ಡೈನಿಂಗ್ ಚೇರುಗಳು | 50 |
| 11. | ಡೈನಿಂಗ್‌ಟೇಬಲ್ ಮಾರ್ಬಲ್ ಸ್ಟೋನ್‌ವಿತ್ ಸ್ಟೂಲ್ ಲೆಗ್ | 13 |
| 12. | ತೇಗದ ಮರದ ಸ್ಕ್ರೀನ್ | 02 |
| 13. | ಅಲ್ಯೂಮಿನಿಯಂ ರ್‍ಯಾಕ್ ವಿತ್ 3 ಸ್ಟೆಪ್ಸ್ | 04 |
| 14. | ಅಲ್ಯೂಮಿನಿಯಂ ರೈಸ್‌ಕುಕ್ಕರ್ | 03 |
| 15. | ಅಲ್ಯೂಮಿನಿಯಂ ವಾಟರ್‌ಟ್ರೇ | 01 |
| 16. | ಅಲ್ಯೂಮಿನಿಯಂ ರ್‍ಯಾಕ್ | 02 |
| 17. | ಅಲ್ಯೂಮಿನಿಯಂ ಕೂಲರ್ (ಬಾಕ್ಸ್‌ಟೈಪ್) | 01 |
| 18. | ಅಲ್ಯೂಮಿನಿಯಂ ಸ್ಟ್ಯಾಂಡ್ ವಿತ್ ಮಾರ್ಬಲ್ | 01 |
| 19. | ಅಲ್ಯೂಮಿನಿಯಂ ವಾಶ್ ಬೇಸಿನ್ (1 ವಿತ್ ಸ್ಟ್ಯಾಂಡ್, 1 ವಿತೌಟ್ ಸ್ಟ್ಯಾಂಡ್) | 02 |
| 20. | ಅಲ್ಯೂಮಿನಿಯಂ ತವಾ | 01 |
| 21. | ಅಲ್ಯೂಮಿನಿಯಂ ಕೋಕನೆಟ್ ಸ್ಕ್ರಾಪರ್ | 01 |

| | | |
|---|---|---|
| 22. | ಅಲ್ಯೂಮಿನಿಯಂ ಹಾಟ್ ಬಾಕ್ಸ್ ವಿತ್ 6 ಕಂಟೇನರ್ ಅಂಡ್ ಲಿಡ್ | 01 |
| 23. | ರೈಸ್ ಸ್ಟೀಮರ್ | 01 |
| 24. | ಬಜಾಜ್ ವಾಲ್ ಫ್ಯಾನ್ | 04 |
| 25. | ಅಲ್ಯೂಮಿನಿಯಂ ವಾಟರ್‌ಕೂಲರ್ | 01 |
| 26. | ಅಲ್ಯೂಮಿನಿಯಂ ವಾರ್ಷಿಂಗ್ ಸ್ಟ್ಯಾಂಡ್ | 01 |
| 27. | ನವತಾಲ್ ಬೀಗ | 02 |
| 28. | ನಾಲ್ಕು ಸಂಖ್ಯೆದೂರವಾಣಿಯಂತ್ರ | 01 |
| 29. | ಗ್ರ್ಯಾನೈಟ್‌ಟಾಪ್‌ನಟೇಬಲ್‌ಗಳು | 14 |
| 30. | ಪೌಡರ್‌ಕೋಟೆಡ್ ಮೆಟಾಲಿಕ್ ಡೈನಿಂಗ್ ಚೇರುಗಳು | 56 |

ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು